ಪಂಪ್ ಮಾಡಿ ಸ್ಟೌವನ್ನು ಹಚ್ಚಿ ಕಾಫಿ ಮಾಡುತ್ತಾ ಒಬ್ಬಳೇ ಕುಳಿತಿದ್ದಳು.

ಮತ್ತೆ ಬೆಳಿಗ್ಗೆ ಕಂಡ ಆ ಮುಖ ನನಗೆ ಕಾಣಿಸಲೇ ಇಲ್ಲ. ಮತ್ತದೇ ಅನುಮಾನ. ಬೆಳಿಗ್ಗೆ ಕಂಡಿದ್ದು ನಿಜವೇ ಅಥವಾ ಭ್ರಮೆಯೇ? ಅದೇ ಅಯೋಮಯ. ಇವತ್ತು ಕಾಣಬಹುದು, ನಾಳೆ ಕಾಣಬಹುದೆಂದು ಆ ಮುಖಕ್ಕಾಗಿ ನಿರೀಕ್ಷಿಸಿದ್ದೇ ಬಂತು. ವಾರವಾದರೂ ಕಾಣಿಸಲಿಲ್ಲ. ಬಹುಶಃ ಬಂದವನು ಆಯವ್ವಳ ಯಾವುದಾದರೂ ಸಂಬಂಧಿಕನಿರಬಹುದೆಂದು ಸಮಾಧಾನವಾಗುತ್ತಿದ್ದಂತೇ ಮನಸ್ಸು ವಿಚಿತ್ರ ರೀತಿಯಲ್ಲಿ ನಿರಾಳವಾಯಿತು. ಆದರೂ ಬೆಳಿಗ್ಗೆ ನಾ ಏಳುವುದಕ್ಕೆ ಮುಂಚೆಯೇ ಯಾರೋ ಆ ಮನೆಯ ಬಾಗಿಲು ತೆರೆದುಕೊಂಡು ಹೊರ ಹೋಗಿ, ರಾತ್ರಿ ಯಾವುದೋ ಒಂದು ಜಾವದಲ್ಲಿ ಬಾಗಿಲೆಳೆದುಕೊಂಡು ಒಳ ಬರುತ್ತಿರಬಹುದೆನ್ನುವ ಗುಮಾನಿ ಮಾತ್ರ ಹಾಗೇ ಉಳಿದುಕೊಂಡಿತು.

ಇದಾಗಿ ಎಷ್ಟೋ ದಿನಗಳ ನಂತರ ಅಥವಾ ತಿಂಗಳುಗಳ ಮೇಲೆಯೇ ಇರಬೇಕು, ಒಂದು ರಾತ್ರಿ ಇದ್ದಕ್ಕಿದ್ದಂತೆ ನಂಗೆ ಸಟ್ಟನೆ ಎಚ್ಚರವಾಯಿತು. ಮಗ್ಗುಲಲ್ಲಿ ಯಾವುದೋ ನೆರಳೊಂದು ಸರಿದುಹೋದ ಹಾಗೆ ಅನ್ನಿಸಿ, ದಢಕ್ಕನೆದ್ದು ದೀಪ ಹಾಕಿದೆ. ಮುಚ್ಚಿದ ಕಿಟಕಿ, ಬಾಗಿಲುಗಳು ಮುಚ್ಚಿದಂತೆ ಇದ್ದವು. ಅವತ್ತಿನ ಆ ಘಟನೆಯ ನಂತರ ಬಾಗಿಲಿಗೆ ಕುರ್ಚಿ ಅಡ್ಡವಾಗಿ ಇಟ್ಟು ಮಲಗುವುದು ರೂಢಿಯಾಗಿ ಹೋಗಿತ್ತು. ಅದೂ ಕೂಡಾ ನಾ ಇಟ್ಟಂತೇ ಇತ್ತು. ಸುಮಾರು ಹೊತ್ತು ಏನೂ ತೋಚದೇ ಗೋಡೆಗೆ ಒರಗಿ ಸುಮ್ಮನೆ ಕುಳಿತೆ. ದೀಪ ಹಾಕಿಕೊಂಡು ಕೂತೇ ನಿದ್ರಿಸಲು ಪ್ರಯತ್ನಿಸಿದರೂ, ಕಣ್ಣು ಮುಚ್ಚಿದ ತಕ್ಷಣ ಯಾವುದೋ ಜಾಗ್ರತೆಯಲ್ಲಿ ಸಟ್ಟನೆ ತೆರೆದುಕೊಳ್ಳುತ್ತಿತ್ತು.

ಊರು ನೆನೆದೆ, ಅಮ್ಮನ ನೆನೆದೆ, ತಮ್ಮನ ನೆನೆದೆ, ಅಪ್ಪನ ನೆನೆದೆ. ಸರಿರಾತ್ರಿಯಲ್ಲಿ ಯಾಕೆ ಅವರು ನನ್ನನ್ನು ಇಲ್ಲಿಗೆ ಕಳುಹಿಸಿದರು ತಿಳಿಯದೆ ಅತ್ತೆ. ಅಳು ನಿಯಂತ್ರಣ ತಪ್ಪಿ ಜೋರಾಗಿ ಬಿಕ್ಕಿ ಬಿಕ್ಕಿ ಅತ್ತೆ.

ಆ ಅಳುವಿನ ಸದ್ದಿನಲ್ಲೇ ಮತ್ಯಾರೋ, ಮತ್ತೆಲ್ಲೋ ಅಳುತ್ತಾ ನನಗೆ ಸಾಥ್ ಕೊಡುತ್ತಿದ್ದ ಹಾಗೆ ಅನ್ನಿಸಿದ್ದೇ ಗಾಬರಿಯಿಂದ ಅಳು ನಿಲ್ಲಿಸಿ ಆ ಸದ್ದನ್ನು ಆಲಿಸಲು ಪ್ರಯತ್ನಿಸಿದೆ. ಕ್ಷೀಣವಾಗಿ, ಎಲ್ಲೋ ದೂರದಿಂದ ಅಳುತ್ತಿರುವ ಹೆಣ್ಣಿನ ಧ್ವನಿಯೊಂದು ತೀಕ್ಷ್ಣವಾಗಿ ಮೂಡಿ ಬರುತ್ತಿತ್ತು!

ಆ ಸದ್ದಿನ ಜೊತೆಗೆ ಯಾರೋ ಜೋರಾಗಿ ಮಣ ಮಣಿಸುತ್ತಿರುವ ಮತ್ತೊಂದು ಸದ್ದು. ಮೊದಲು ಮಾತಿನಂತೆ ಕೇಳಿಸಿತು, ಆನಂತರ ಮಂತ್ರದಂತೆ. ದಿಗಿಲಿನಿಂದ ಕುಳಿತಲ್ಲಿಂದೆದ್ದು ದೀಪ ಆರಿಸಿದೆ. ಸಟ್ಟನೆ ಮುಚ್ಚಿದ ಕೋಣೆಯ ಕಿಟಕಿಯ ಮೇಲೆ ಪ್ರಕಾಶಮಾನವಾದ ಬೆಳಕು ಪ್ರಜ್ವಲಿಸತೊಡಗಿತು. ಅದು ಹೊರಗಿನಿಂದ ಬರುತ್ತಿರುವ ಬೆಳಕೆಂದೂ ಅರ್ಥವಾಯಿತು.

ಆ ಗಾಬರಿಯಲ್ಲೂ ಏನೋ ಕುತೂಹಲ. ಮೆಲ್ಲನೆದ್ದು ಕಿಟಕಿಯ ಬಳಿ ಸರಿದು ಹಣಕಿದೆ. ಮುಚ್ಚಿದ್ದ ಮರದ ಚೌಕಟ್ಟಿನ ಕಿಟಕಿಯ ನಡುವಿನ ಸಣ್ಣ ಗಾಜಿನಲ್ಲಿ ಏನೂ ಕಾಣಿಸುತ್ತಿರಲಿಲ್ಲ. ನಡುಗುತ್ತಿರುವ ಕೈಯಿಂದ ಅಂಜುತ್ತಲೇ ಮೆಲ್ಲಗೆ ಸದ್ದಾಗದಂತೆ ಕಿಟಕಿ ತೆರೆದೆ.

ಪ್ರಕಾಶಮಾನವಾದ ಬೆಳಕು ಒಳಾಂಗಳದ ಕಡೆಯಿಂದ ಬರುತ್ತಿತ್ತು. ಬಾವಿಕಟ್ಟೆಯ ಒಂದು ಪಾರ್ಶ್ವ ಮಾತ್ರ ಕಾಣುತ್ತಿದ್ದುದ್ದರಿಂದ ಯಾವುದೂ ಸ್ಪುಟವಾಗಿ ಗೋಚರಿಸುತ್ತಿರಲಿಲ್ಲ. ಕಣ್ಣು ಕಿರಿದುಗೊಳಿಸಿ ನೋಡಿದಾಗ ಮನುಷ್ಯಾಕೃತಿಗಳು ಅಲ್ಲಿರುವಂತೆ ಕಂಡವು. ಪಂಚೆಯುಟ್ಟು, ಸೊಂಟದ ಮೇಲೆ ಬೋಳಾಗಿದ್ದ ಸಣಕಲು ಗಂಡು ಆಕೃತಿ, ಮತ್ತೆರಡು ಹೆಣ್ಣು ಆಕೃತಿಗಳಂತೆ ಅನ್ನಿಸಿತು. ಬೆಂಕಿ ಹಾಕಿದ್ದರೋ, ಅಗ್ನಿಷ್ಟಿಕೆ ಇಟ್ಟಿದ್ದರೋ ಬಾವಿಕಟ್ಟೆ ಮರೆಯಾಗಿ ಸರಿಯಾಗಿ ಕಾಣುತ್ತಿರಲಿಲ್ಲ. ಆದರೆ ಬೆಂಕಿಯ ಜ್ವಾಲೆ ಆಗಾಗ ಗಾಳಿಗೆ ತೊನೆದಾಡುತ್ತಾ ಕಟ್ಟೆಯಾಚೆಗೂ ಪಸರಿಸಿಕೊಳ್ಳುತ್ತಿತ್ತು. ಗಂಡು ಆಕೃತಿ ಕೈ ಹಿಡಿದು ಇಬ್ಬರಲ್ಲಿ ಒಬ್ಬ ಹೆಣ್ಣು ಆಕೃತಿಯನ್ನು ಕಟ್ಟೆಯ ಸುತ್ತಾ ಸುತ್ತಿಸಲು ಶುರು ಮಾಡಿದ. ಬೆಂಕಿಯ ಜ್ವಾಲೆಯಲ್ಲಿ ಬಿಚ್ಚಿದ ಮುಡಿಯ, ಅರಿಶಿನ ಲೇಪಿತ ಸಂಪೂರ್ಣ ನಗ್ನ ಹೆಣ್ಣು ದೇಹವೊಂದು ಬಂಗಾರದಂತೆ ಮಿನುಗುತ್ತಿತ್ತು!

ಯಾರಾಕೆ? ಆಯವ್ವಳೇ? ಗಂಡು ಆಕೃತಿಯೊಂದಿಗೆ ಸುಮ್ಮನೆ ಕಟ್ಟೆ ಸುತ್ತುತ್ತಿದ್ದ ಆಕೆಗೆ ಇತ್ತಲಿನ ಪರಿಜ್ಞಾನವೇ ಇದ್ದಂತಿರಲಿಲ್ಲ. ಅದೆಷ್ಟೋ ಸುತ್ತು ಹೊಡೆಸಿದ ನಂತರ ಆತ ಆಕೆಯನ್ನು ಬಾವಿ ಕಟ್ಟೆಯೆದುರಿನ ಮಣೆಯಲ್ಲಿ ಕೂರಿಸಿದ. ನಂತರ ಹರಿವಾಣ ಹಿಡಿದುಕೊಂಡು ಬಂದು ಏನನ್ನೋ ಅವಳ ಹಣೆಗೆ